ಮೂರು ಕೋಟಿ ಆಗುತ್ತಾ ಇದೆ. ಆದ್ದರಿಂದ ಆದಷ್ಟು ಬೇಗ ಹುಡ್ಕೋದಿಂದ ವ್ಯವಸ್ಥೆ ಮಾಡುತ್ತಿರಾ ? ಇದನ್ನು ಹೇಳುತ್ತಲೇ ಸುಮಾರು 6 ತಿಂಗಳು ಕಳೆದು ಹೋಯಿತು ಅದನ್ನೇನಾದರೂ ಮಾಡುತ್ತೀರೋ ?

ಶ್ರೀ ವೈಜನಾಥ ಪಾಟೀಲ್ : ಮೊದಲಿನ ಸರ್ಕಾರದವರು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಮೂರನೇ ಒಂದು ಭಾಗದಷ್ಟು ಹಣವನ್ನು ಕಟ್ಟಬೇಕು ಎಂದು ಪುರಸಭೆಯ ಆರ್ಥಿಕ ಪರಿಸ್ಥಿತಿ ಎಲ್ಲಾ ಕಡೆ ಕೆಟ್ಟು ಹೋಗಿದೆ. ಆದರೂ ಕೂಡ ಮೊದಲಿನ ಸರ್ಕಾರಕ್ಕೆ ಅದರ ಬಗ್ಗೆ ಅರಿವು ಇತ್ತೋ ಅಥವಾ ಇಲ್ಲವೋ ಗೊತ್ತಿಲ್ಲ. ಅವರು ಆ ತೀರ್ಮಾನವನ್ನು ತೆಗೆದು ಕೊಂಡಿದ್ದಾರೆ. ಅದನ್ನು ಬದಲಾಯಿಸಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊದಲಿನ ಸರ್ಕಾರ ಎಂದು ಹೇಳುತ್ತಿದ್ದಾರೆ. ಅದರ ಹಿಂದಿನ ಸರ್ಕಾರ ಅವರದ್ದೇ ಇತ್ತು, ಅವರು ಏನು ಮಾಡಿದ್ದಾರೆ. ಮೂರನೇ ಒಂದು ಭಾಗದಷ್ಟು ಹಣವನ್ನು ಪುರಸಭೆಯವರು ಕಟ್ಟಬೇಕೆಂಬುದು ಕಳೆದ ಹತ್ತಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಈ ಹಿಂದಿನ ಸರ್ಕಾರಕ್ಕೆ ಗೊತ್ತಿಲ್ಲ ಅಂದರೆ ಅದರ ಹಿಂದೆ 7 ವರ್ಷ ನಿಮ್ಮ ಸರ್ಕಾರ ಇತ್ತಲ್ಲಾ, ಆಗ ಏನು ಪ್ರಾವಿಷನ್ ಇತ್ತು ಹೇಳಿ ನೋಡೋಣ. ಸುಮ್ಮನೆ ಗೊತ್ತಿಲ್ಲದೆ ಏನನ್ನಾದರೂ ಹೇಳುವುದಕ್ಕೆ ಹೋಗಬೇಡಿ.

Sub : Sick Industries in the state.

Starred D.A. Question No. 204 (408)

Shri T.B. Jayachandra (Kallambell): Will the Minister for small Scale Industries be pleased to state

a. How many small scale Industries are established in the State ? Of them how many are sick and how much investment are made in them ?

b. Whether there is any institute like BIFR for rehabilitation of sick industrial units ?

c. Whether there is need for such an institution ?

d. What action are being taken to rehabilitate sick Small Scale Industries ?

e. What is the action taken by the Govt. for the revival of mini Cement factories coming under the purview of Small Scale Industries ?

Sri. N.M. Nabi (Minister for Small Scale Industries) :

a. As on 28.2.95, 1,61,774 SSI units are registered in the State. As per the report of RBI as on 31.3.94,

13,950 SSI units are sick, Information about the investment made in these units is not available. However, it is learnt that a sum of Rs. 141.15 crores is the outstanding advance to these units.

b. No

c. Yes

d. There is a state Level Rehabilitation Committee constituted under the Chairmanship of Commissioner for ID & Director of I&C to sanction Seed Margin Money loan not exceeding Rs. 50,000/- in each case for revival of sick units. There is a District Level Rehabilitation Committee constituted under the Charimenship of General Manager, District Industries centre to identify sick SSI units in consultation with the represent atives of Karnataka State Financial Corporation and commercial Banks to revive them.

e. The following are the reliefs extended by the Govt. in respect of Mini Cement Plants.

1. Sales Tax reduced from 14% to 10%.

2. Price preference is available for Stores Purchase Department registered units.

3. Revival proposals can be considered by Financial Institutions.

ಶ್ರೀ ಟಿ.ಬಿ. ಜಯಚಂದ್ರ : ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ರೋಗಗ್ರಸ್ಥ ಕೈಗಾರಿಕಾ ಘಟಕಗಳಿಗೆ ಪುನಶ್ಚೇತನಮಾಡುವುದಕ್ಕೋಸ್ಕರ ಬಿ.ಎಫ್.ಆರ್. ಮಾದರಿಯ ಸಂಸ್ಥೆಯ ವ್ಯವಸ್ಥೆ ಇದೆ. ಎನ್ನತಕ್ಕಂತಹ ಮಾತನ್ನು ತಾವು ಒಪ್ಪಿಕೊಳ್ಳುತ್ತೀರಿ ಮತ್ತು ಈಗಾಗಲೇ ಈ ವ್ಯವಸ್ಥೆಯಲ್ಲಿ ಏನೇನು ಸೌಲಭ್ಯಗಳನ್ನು ಕೊಡುವುದಕ್ಕೆ ಯಾವ ರೀತಿಯಾದ ಸಮಿತಿ ಇದೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಅದರಿಂದ ಯಾವುದೇ ಪ್ರಯೋಜನ ಇಲ್ಲ. ನಾನು ಈ ಸಂದರ್ಭದಲ್ಲಿ ಕೇಳತಕ್ಕಂಥದ್ದು ಏನೆಂದರೆ ಇದು ಎಸ್. ಎಸ್. ಐ. ಇಯರ್. ಸಣ್ಣಕೈಗಾರಿಕಾ ವರ್ಷ. ಆದ್ದರಿಂದ ಇಡಿ ರಾಜ್ಯದ ಜನರೆಲ್ಲರೂ ಏನನ್ನು ತಾವು ಘೋಷಣೆ ಮಾಡುತ್ತೀರಾ ಎಂಬುದನ್ನು ನಿರೀಕ್ಷಣೆ ಮಾಡುತ್ತಿದ್ದಾರೆಂದು, ಅದಕ್ಕೋಸ್ಕರ ಬಿ.ಎಫ್.ಆರ್. ಮಾದರಿಯಲ್ಲಿರತಕ್ಕ ಒಂದು ಕ್ವಾಸಿ ಜ್ಯುಡಿಷಿಯಲ್ ಅಥಾರಿಟಿಯನ್ನು ಕ್ರಿಯೇಟ್ ಮಾಡುತ್ತೀರೋ ಇದಕ್ಕೆ ತಾವು ಒಪ್ಪಿಕೊಂಡಿದ್ದೀರೋ ? ಇದನ್ನು ಯಾವಾಗ ಮಾಡುತ್ತೀರಿ ? ಅದರ ರೂಪ ರೇಷೆಗಳೇನು ಎಂಬುದನ್ನು ವಿವರಿಸಬೇಕು ಇನ್ನು ಸಣ್ಣ ಮಿನಿ ಸಿಮೆಂಟ್

ಕೈಗಾರಿಕೆಗಳು ಏನು ಇವೆ. ಅವುಗಳಿಗೆ ಸವಲತ್ತನ್ನು ರಿಯಾಯಿತಿಯನ್ನು ಕೊಟ್ಟಿದ್ದೀರಿ ಕೊಟ್ಟಿಲ್ಲ ಎಂದು ಹೇಳುತ್ತಿಲ್ಲ. ಅದರೆ ಎಲ್ಲಾ ರಾಜ್ಯದಲ್ಲೂ ಕೂಡ 5 ವರ್ಷಗಳ ಅವಧಿಯನ್ನು ನಿಗಧಿ ಮಾಡಿ, 50 ಪರ್ಸ್ಂಟ್ ಸೇಲ್ಸ್ ಟ್ಯಾಕ್ಸ್ ಕೊಟ್ಟಿರಬೇಕಾದರೆ. ನೀವು ಮಾತ್ರ ಒಂದು ವರ್ಷಕ್ಕೆ 2.00ರೂ. ಇಳಿಸತಕ್ಕ ಒಂದು ಕೆಲಸವನ್ನು ಮಾಡಿದ್ದೀರಿ. ಇದು ಬಹಳ ಚೌಕಾಸಿಯಾದಂತಹ ವ್ಯವಹಾರವಾಗುತ್ತದೆ. ಸಣ್ಣ ಕೈಗಾರಿಕೆಗಳಲ್ಲಿ ಇಂತಹ ವ್ಯವಸ್ಥೆ ಬೇಡ. ದಯಮಾಡಿ ಬೇರೆ ರಾಜ್ಯದಲ್ಲಿ ಅಂದರೆ ಆಂಧ್ರ, ಕೇರಳ ಆ ರಾಜ್ಯದಲ್ಲಿರುವ ಕೊಟ್ಟಿರುವ ಮಾದರಿಯಲ್ಲಾದರೂ ಕೊಡುತ್ತೆವೆ ಎನ್ನತಕ್ಕಂತಹ ಮಾತನ್ನು ದಯವಿಟ್ಟು ಹೇಳಬೇಕು. ಇನ್ನು 6 ತಿಂಗಳು ಉಳಿದಿದೆ. 200.00 ರೂಗಳಾಗುತ್ತವೆ. ಸಿಮೆಂಟ್‌ನ ಬೆಲೆ. ಸಣ್ಣ ಕೈಗಾರಿಕೆಯಿಂದ ಬರತಕ್ಕ ಸಿಮೆಂಟನ್ನು ಯಾರೂ ಉಪಯೋಗಿಸುತ್ತಿಲ್ಲ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರ ಮಾತ್ರ ಇದನ್ನು ಉಪಯೋಗಿಸುತ್ತಾರೆ. ಗ್ರಾಮಗಳ ದೃಷ್ಟಿಯಿಂದಲಾದರೂ ಈ ತೀರ್ಮಾನವನ್ನು ತೆಗೆದು ಕೊಳ್ಳುತ್ತೀರಾ ?

ಶ್ರೀ ಎನ್. ಎಂ. ನಬಿ : ಮಾನ್ಯ ಸದಸ್ಯರು ಹೇಳಿದ ಹಾಗೆ ಬಿ.ಐ.ಎಫ್.ಆರ್. ಹೇಗೆ ಇದೆ, ಅದೇ ರೀತಿ ಸಣ್ಣ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆಯೂ ಮಾಡಬೇಕು ಎನ್ನುವ ಪ್ರಯತ್ನ ಇದೆ ಎನ್ನತಕ್ಕ ಮಾತನ್ನು ಅವರಿಗೆ ಹೇಳಬಯಸುತ್ತೇನೆ. ನಮ್ಮ ಅಧಿಕಾರಿಗಳನ್ನು ಕರೆದು ಅದರ ಬಗ್ಗೆ ಚರ್ಚೆ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದೇನೆ. ಆದಷ್ಟು ಬೇಗ ಅದನ್ನು ಮಾಡುತ್ತೇವೆ. ಮಿನಿ ಸಿಮೆಂಟ್ ಕೈಗಾರಿಕೆಗಳ ಬಗ್ಗೆ ನೆರೆ ರಾಜ್ಯಗಳಲ್ಲಿ ಅದಕ್ಕೆ ಬಹಳಷ್ಟು ರಿಯಾಯಿತಿಯನ್ನು ಕೊಟ್ಟಿದ್ದಾರೆ ಎನ್ನುವ ಮಾತನ್ನು ತಿಳಿಸಿದ್ದಾರೆ. ನೆರೆರಾಜ್ಯಗಳಲ್ಲಿರುವ ವ್ಯವಸ್ಥೆ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ನಮ್ಮ ಘಟಕಗಳಿಗೂ ಕೂಡ ಎಷ್ಟು ಸವಲತ್ತುಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆಯೇ ಅದನ್ನು ಅವರಿಗೆ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ತಾವು ಬೇರೆ ರಾಜ್ಯಕ್ಕೆ ಹೋಗುವುದು ಬೇಕಾಗಿಲ್ಲ. ನನ್ನ ಹತ್ತಿರವೇ ಇದೆಯಲ್ಲಾ ಬೇರೆ ರಾಜ್ಯಗಳಲ್ಲಿ ಏನೇನು ಸವಲತ್ತುಗಳನ್ನು ಕೊಟ್ಟಿದ್ದಾರೆಂಬುದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಅಲ್ಲಿಗೆ ಹೋಗುವುದು ಬೇಕಾಗಿಲ್ಲ. ಇವತ್ತು ಕೊಟ್ಟಿದ್ದಾರೆ. ಅದರ ಆಧಾರದ ಮೇಲೆಯೇ ನಾನು ಈ ಪ್ರಶ್ನೆಯನ್ನು ತಮಗೆ ಕೇಳಿರುವುದು. ದಯಮಾಡಿ ಇದನ್ನು ಒಪ್ಪಬೇಕೆಂಬುದು. ಇದು ಒಂದು ಬಹಳ ಮುಖ್ಯವಾಗಿ ಮಾನ್ಯ ಸಚಿವರಲ್ಲಿ ಕೇಳುವುದು. ಎಲೆಕ್ಟ್ರಿಸಿಟಿ ಒಂದನೇ ಮುಖ್ಯಕಾರಣ ಇವತ್ತು ಈ ಸಣ್ಣ ಕೈಗಾರಿಕೆಗಳು ಸಿಕ್ ಆಗುವುದಕ್ಕೆ ಅದಕ್ಕೋಸ್ಕರ ಸಪರೇಟಾಗಿ ಇಂಡಸ್ಟ್ರೀಸ್‌ಗೆ ಫೀಡರ್ ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತಿರಾ ? ಪವರ್ ಮಿನಿಸಟ್ಟರ್ ಕೂಡ ಇಲ್ಲೇ ಇದ್ದಾರೆ. ಪ್ರತ್ಯೇಕವಾಗಿ ಇಂಡಸ್ಟ್ರಿಸ್‌ಗಳಿಗೆ ಫೀಡರ್ ಕೊಡುತ್ತೇವೆ ಎಂದು ಮಾನ್ಯಮಂತ್ರಿಗಳು ಉತ್ತರವನ್ನು ಹೇಳಬೇಕು.

ಶ್ರೀ ಎನ್. ಎಂ. ನಬಿ : ಈಗ ಇರತಕ್ಕ ವ್ಯವಸ್ಥೆಯಲ್ಲಿ ವಿದ್ಯುಚ್ಛಕ್ತಿ ಅಡಚಣೆಗಳಿಂದ ಬಹಳಷ್ಟು ತೊಂದರೆಯಾಗಿರುವ ಬಗ್ಗೆ ಅನೇಕ ದೂರುಗಳು ಬಂದಿವೆ. ಅದನ್ನು ಮಾನ್ಯ ವಿದ್ಯುಚ್ಛಕ್ತಿ ಸಚಿವರ ಜೊತೆ ಪ್ರಸ್ತಾಪ ಮಾಡಿದ್ದೇವೆ. ಆದಷ್ಟು ಬೇಗ ಸರಿಪಡಿಸುತ್ತೇವೆ ಎನ್ನತಕ್ಕ ಮಾತನ್ನು ಈ ಹಿಂದೆ ಹೇಳಿದ್ದೇನೆ. ಮತ್ತೆ ಈಗ ಅದನ್ನೇ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.